ವೆಂಕಟೇಶ ಬಂದ ಕೂಡಲೇ ಸಿಕ್ಕಾಪಟ್ಟೆ ಬೈಯಬೇಕೆಂದು ರೂಮಿನ ಬಳಿ ಕಾಯುತ್ತಿದ್ದ ಪ್ರಸನ್ನ ಅವನ ಮುಖವನ್ನು ಕಂಡಕೂಡಲೇ ಪೆಚ್ಚಾದ. ತುಂಬಾ ಕಾಯಿಲೆ ಬಂದವರಂತೆ ಬಳಲಿಹೋಗಿದ್ದ. ಕಣ್ಣು ಕೆಂಪಾಗಿದ್ದವು. ವರ್ಷಗಳ ಹಿಂದಷ್ಟೇ ಮಹಾನಗರಕ್ಕೆ ಬಂದಿದ್ದ ಅವನ ಹಳ್ಳಿ ಪೊರೆ ಕಳಚಿಲ್ಲವೆಂದುಕೊಂಡ. ಅವನ ಪಾಡಿಗೆ ಅವನಿರಲಿ ಎನಿಸಿತು. ಹತ್ತಿರದ ಹೋಟೆಲಿಂದ ರೈಸ್ ಬಾತ್ ತಂದು ಇಬ್ಬರೂ ಊಟ ಮಾಡಿದರು. ಮೂರ್ನಾಲ್ಕು ದಿನಗಳಿಂದ ಈ ರಂಕಲುಗಳಲ್ಲಿ ಸಿಕ್ಕಿಕೊಂಡು ವೆಂಕಟೇಶ ಸರಿಯಾಗಿ ಹೊಟ್ಟೆಗೆ ತಿಂದಿರಲಿಲ್ಲ.

ನೆಲಮಂಗಲದ ಸಾವಿಗೆ ಹೋದ ವಿಷಯ ಪ್ರಸನ್ನನಿಗೆ ಗೊತ್ತಿರಲಿಲ್ಲ. ಆ ಬಗ್ಗೆ ವಿವರಿಸಿದ. ಜೊತೆಗೆ ಆಫೀಸಿನಲ್ಲಾದ ಘಟನೆಗಳನ್ನೂ ಹೇಳಿದ. "ನೆಲಮಂಗಲದಲ್ಲಿ ಆದ ಸಾವಿಗಿಂತ ಇತರರು ಆ ಸಂದರ್ಭವನ್ನು ಬಳಸಿಕೊಂಡಿದ್ದೇ ನಿನ್ನ ಮನಸ್ಸಿಗೆ ಹೆಚ್ಚು ಘಾಸಿ ಮಾಡಿದೆ" ಎಂದು ಪ್ರಸನ್ನ ನೇರವಾಗಿ ಹೇಳಿಬಿಟ್ಟ. ಅದು ವೆಂಕಟೇಶನಿಗೆ ನಾಟಿತು. ಆ ರೀತಿ ಅವನು ಯೋಚಿಸಿರಲಿಲ್ಲ.

★★★

ವೆಂಕಟೇಶ ಆ ಹಳ್ಳಿ ತಲುಪಿದಾಗ ರಾತ್ರಿ ಮೂರು ಗಂಟೆ. ಪ್ರಸನ್ನನ ಸ್ನೇಹಿತ ಗೋಪಾಲಿ ಬಸ್‌ಸ್ಟ್ಯಾಂಡಿಗೆ ಬಂದು ಕರೆದುಕೊಂಡು ಹೋದ. ಮನೆಯಲ್ಲಿ ಬ್ಯಾಗು ಇಟ್ಟವನೇ ಸ್ನೇಹಿತನೊಡಗೂಡಿ ಸಾವಿನ ಮನೆ ಹತ್ತಿರ ಹೋದ. ಗುರುಭಜನೆ ನಡೆಯುತ್ತಿತ್ತು. ಬಾಗಿಲಿಗೆದುರಾಗಿ ದಪ್ಪ ಸೌದೆ ತುಂಡೊಂದನ್ನು ಇಟ್ಟು ಬೆಂಕಿ ಹಾಕಿದ್ದರು. ಚಿಟಿ ಚಿಟಿ ಎನ್ನುತ್ತಾ ಬೆಂಕಿ ಕಣಗಳು ಹಾರುತ್ತಿದ್ದವು. ಅಲ್ಲೇ ಪಕ್ಕದಲ್ಲಿ ಪ್ಲಾಸ್ಟಿಕ್ ಚೇರಿನ ಮೇಲೆ ಸತ್ತ ಹುಡುಗನ ಫೋಟೊ. ಮುಖ ಕಾಣದಂತೆ ಹಾರ ಮರೆಯಾಗಿಸಿತ್ತು. ಸತ್ತಿದ್ದು ಇಪ್ಪತ್ತು ವರ್ಷದ ಯುವಕ. ಗಾಡಿಗೆ ಗೊಬ್ಬರ ತುಂಬುವಾಗ ಮೂಕಿನ ಕಂಬ ಹೊಟ್ಟೆಗೆ ತಾಗಿತ್ತು. ಮೇಲೆ ಯಾವ ಗಾಯವೂ ಆಗಿರಲಿಲ್ಲ. ಆದರೆ ಒಳಗೇ ರಕ್ತಸ್ರಾವವಾಗಿ ಹೊಟ್ಟೆನೋವೆಂದು ಬಿದ್ದುಬಿಟ್ಟ. ಹತ್ತಿರದ ಆಸ್ಪತ್ರೆಗೆ ಹೋಗಿ ಅಲ್ಲಿಂದ ದೊಡ್ಡಾಸ್ಪತ್ರೆಗೆ ತೆಗೆದುಕೊಂಡು ಹೋದರು. ಅಷ್ಟರಲ್ಲಿ ವಿಪರೀತ ರಕ್ತ ಹೋಗಿತ್ತು. ಉಳಿಯಲಿಲ್ಲ. ಹೆಣವನ್ನು ಊರಿಗೆ ತಂದಾಗ ರಾತ್ರಿ ಹತ್ತು ಗಂಟೆ.

ಗೋಪಾಲಿಯಿಂದ ಈ ವಿಷಯವೆಲ್ಲಾ ತಿಳಿಯಿತು. ಆ ಗಳಿಗೆಯಿಂದ ಸತತ ಎರಡು ರಾತ್ರಿ ಒಂದು ಹಗಲು ಅಲ್ಲಿ ಕಳೆದ. ಎಲ್ಲ ಕ್ರಿಯೆಗಳನ್ನೂ ಕಣ್ಣಲ್ಲೇ ದಾಖಲಿಸಿದ. ಬಿದಿರು ಬೊಂಬು ತರುವವರು, ಚಟ್ಟ ಕಟ್ಟುವವರು, ಗುಂಡಿ ತೋಡುವವರು, ಕೊಂಬು ಊದುವವರು, ತಮಟೆ ಹೊಡೆಯುವವರು, ಅಪ್ಪಅಮ್ಮ, ಅಜ್ಜಿ, ಹತ್ತಿರದ ನೆಂಟರು, ದೂರದ ನೆಂಟರು, ಸ್ನೇಹಿತರು, ಪೂಜಾರಪ್ಪ, ಊರಿನವರು, ಪಕ್ಕದೂರಿನವರು ಎಲ್ಲರನ್ನೂ ನೋಡಿದ, ಸಾಧ್ಯವಾದವರನ್ನು ಮಾತನಾಡಿಸಿದ. ಹೆಣ ಹೊತ್ತುಕೊಂಡು ಹೋಗುವಾಗ ಜೊತೆಯಾದ. ಹೆಣದ ಮುಖ ನೋಡುವುದು, ಮೂರು ಹಿಡಿ ಮಣ್ಣು ಹಾಕುವುದು, ದೀಪ ನೋಡುವುದು, ಕಾಲು ತೊಳೆದುಕೊಂಡು ತಲೆಗೆ ನೀರಾಕಿಕೊಳ್ಳುವುದು, ಹುಳಿ ಅನ್ನ ಉಣ್ಣುವುದು... ಹೀಗೆ ಎಲ್ಲ ಕ್ರಿಯೆಗಳಲ್ಲೂ ಭಾಗಿಯಾಗಿ ವಾಪಸಾದ.

★★★

ವರದಿಯ ಮೇಲೆ ಕಣ್ಣಾಡಿಸಿದ ಸಂಪಾದಕರು "ಎರಡು ವಾರ ನೀನು ಬರದೇ ಇರೋದು ನೋಡಿ ಕೆಲ್ಸ ಬಿಟ್ಟೆ ಅಂದ್ಕೊಂಡಿದ್ದೆ" ಅಂದರು. ಸುಮ್ಮನೇ ಕುಳಿತಿದ್ದ ವೆಂಕಟೇಶ. "ಇಡೀ ಪ್ರಕ್ರಿಯೆಯಲ್ಲಿ ನಿನಗೆ ತುಂಬಾ ಕಾಡಿದ್ದು ಅಥವಾ ಅಸಹಜ ಅಂತಾ ಅನ್ನಿಸಿದ ಘಟನೆಗಳು ಯಾವುದು" ಎಂದು ಸಂಪಾದಕರು ಕೇಳಿದರು. ಸ್ವಲ್ಪ ಹೊತ್ತು ಯೋಚಿಸಿ ಹೇಳಲು ಶುರುಮಾಡಿದ.

ಗುಂಡಿಗೆ ಹೆಣ ಇಳಿಸಿದರು, ಗಡಸು ನೆಲದಲ್ಲಿ ಗುಂಡಿ ತೋಡಿದ್ದರಿಂದ ದಪ್ಪ ದಪ್ಪ ಹೆಂಟೆಗಳಿದ್ದವು, ಮೊದಲು ಕೆಲವರು ನುಣ್ಣನೆ ಮಣ್ಣು ಹಾಕಿದರು, ಅದು ಖಾಲಿಯಾದಾಗ ಹೆಂಟೆಗಳನ್ನೇ